ರಾಜ್ಯದಲ್ಲಿ ಕೃಷಿ ವಿದ್ಯಾಲಯದ ಬಿ.ಟೆಕ್., ಎಂ.ಟೆಕ್, ಪದವೀಧರರಿಗೆ ಸರ್ಕಾರಿ ನೇಮಕಾತಿಯಲ್ಲಿ ಪ್ರಾತಿನಿಧ್ಯ ನೀಡುವ ಬಗ್ಗೆ

4673 (5197) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾನಿಲಯದಿಂದ ಬಿ.ಟೆಕ್ ಹಾಗೂ ಎಂ.ಟೆಕ್ (ಕೃಷಿ ಇಂಜಿನಿಯರಿಂಗ್) ಪದವಿ ಪಡೆದ ಪದವೀಧರರ ಸಂಖ್ಯೆ ಎಷ್ಟು?

ಆ) ನೆರೆ ರಾಜ್ಯಗಳಾದ ಮಹಾರಾಷ್ಟ್ರ ತಮಿಳುನಾಡು, ಕೇರಳ, ಆಂಧ್ರ ಪ್ರದೇಶ ರಾಜ್ಯಗಳಲ್ಲಿ ಬಿ.ಟೆಕ್ ಹಾಗೂ ಎಂ.ಟೆಕ್. (ಕೃಷಿ ಇಂಜಿನಿಯರಿಂಗ್) ಪದವಿ ಪಡೆದ ಪದವೀಧರರಿಗೆ ಸರ್ಕಾರಿ ನೇಮಕಾತಿಗಳಲ್ಲಿ ಪ್ರತಿಶತ 50 ರಷ್ಟು ಪ್ರಾತಿನಿಧ್ಯ ನೀಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ನೆರೆ ರಾಜ್ಯಗಳಂತೆ ಈ ರಾಜ್ಯದಲ್ಲಿಯೂ ಪದವಿ ಪಡೆದ ಪದವೀಧರರಿಗೆ ಸಕಾರಿ ನೇಮಕಾತಿಯಲ್ಲಿ ಪ್ರತಿಶತ 50 ರಷ್ಟು ಪ್ರಾತಿನಿಧ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಈ) ಬಿ.ಟೆಕ್ ಹಾಗೂ ಎಂ.ಟೆಕ್ (ಇಂಜಿನಿಯರಿಂಗ್) ಕೃಷಿ ಪದವೀಧರರು ಬಿ.ಎಸ್ಸಿ ಹಾಗೂ ಎಂ.ಎಸಿ (ಅಗ್ರಿ) ಪದವೀಧರರಿಗಿಂತಲೂ ಜಲಾನಯನ ಅಭಿವೃದ್ಧಿ ಭೂಸಾರ ಸಂರಕ್ಷಣೆ, ನೀರಾವರಿ ಹಾಗೂ ಬಿಸಿಗಾಲುವೆ ತಾಂತ್ರಿಕತೆಯಲ್ಲಿ ಹೆಚ್ಚಿನ ಪರಿಣತಿಯನ್ನು ಹೊಂದಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಕೃಷಿ ಇಲಾಖೆಯಲ್ಲಿ ಹೆಚ್ಚಿನ ಪರಿಣತಿಯನ್ನು ಹೊಂದಿರುವ ಬಿ.ಟೆಕ್ ಹಾಗೂ ಎಂ.ಟೆಕ್ (ಕೃಷಿ ಇಂಜಿನಿಯರಿಂಗ್) ಪದವೀಧರರನ್ನು ಜಲಾನಯನ ಅಭಿವೃದ್ಧಿ ಭೂಸಾರ ಸಂರಕ್ಷಣೆ, ನೀರಾವರಿ ಹಾಗೂ ಬಿಸಿಗಾಲುವೆ ತಾಂತ್ರಿಕತೆಯಲ್ಲಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ)

ಕೃವಿವರ	ಬಿ.ಟೆಕ್	ಎಂ.ಟೆಕ್
ಬೆಂಗಳೂರು	68	29
ಧಾರವಾಡ	157	14

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಉ) ಕೃಷಿ ಇಲಾಖೆಯಲ್ಲಿ ಕೃಷಿ ಇಂಜಿನಿಯರಿಂಗ್ ಪದವೀಧರರಿಗೆ ಸಹಾಯಕ ಕೃಷಿ ಅಧಿಕಾರಿ (ಕೃಷಿ ಇಂಜಿನಿಯರಿಂಗ್ ಮತ್ತು ನೀರು ನಿರ್ವಹಣೆ)ಗಳ 58 ಹುದ್ದೆಗಳನ್ನು ಸೃಜಿಸಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೈಲಹೊಂಗಲ ತಾಲ್ಲೂಕಿನಲ್ಲಿ ಪಡಿತರ ಚೀಟಿ ವಿತರಣೆ

4674 (5197) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಪಡಿತರ ಚೀಟಿಗಳನ್ನು ಕಂಪ್ಯೂಟರೀಕರಣ ಮಾಡಿದ ಸಂಗತಿ ನಿಜವೇ;